"ಸ್ಫೂರ್ತಿ ಬರಬೇಕು ಅಲ್ಲವೇ?"

"ಹೌದು, ನೀನು ಹೇಳುವುದು ಸರಿ. ನಿನ್ನ ಪರಿಚಯ?"

"ನನ್ನ ವಿಷಯ ಹೇಳೋದು ಏನಿದೆ? ನನ್ನ ಹೆಸರು ಲೀಸಾ, ಅಂದರೆ ಎಲಿಸಬೆತ್."

"ವಾಸ ಎಲ್ಲಿ?"

"ಇಲ್ಲಿಗೆ ಎರಡು ಕಿಲೋಮೀಟರ್ ದೂರದಲ್ಲಿರುವ ನಾರ್ತ್ ವುಡ್‌ನಲ್ಲಿ. ನಾನು ಅರ್ಜೆಂಟಾಗಿ ಕಿಂಡರ್ ಗಾರ್ಟನ್ನಿಗೆ ಹೋಗಿ ಸ್ಯಾಮನನ್ನು ಕರೆದುಕೊಂಡು ಬರಬೇಕು. ಕ್ಷಮಿಸಿ. ಮತ್ತೆ ಯಾವಾಗಲಾದರೂ ನೋಡೋಣ."

ಪ್ರಾಯಶಃ ಇದಕ್ಕಿಂತ ಹೆಚ್ಚು ವಿಷಯ ತಿಳಿಸಬಾರದು ಎನಿಸಿತೇನೋ ಅವಳಿಗೆ. ಡೇವಿಡನ ಊಹೆ ಮುಂದುವರೆಯಿತು. ಆಗ ಅವನಿಗೆ ಹೊಳೆಯಿತು – ಇವಳ ಬಗ್ಗೆಯೇ ಕಥೆ ಬರೆದರೆ ಹೇಗೆ? ಯಾರೋ ಹೆಂಗಸು, ಎರಡು ಮಕ್ಕಳು, ಸ್ವಾಭಿಮಾನದ ಮಾತು ಬೇರೆ. ಯಾರಿವಳ ಗಂಡ ಹಾಗಾದರೆ?

ಮತ್ತೆ ಕಾದು ಕುಳಿತ  ಅವಳ ಕಥೆಯನ್ನ ಅವಳೇ ಹೇಳಿಕೊಳ್ಳಲಿ. ಮೂರು ದಿನಗಳ ನಂತರ ಲೀಸಾ ಮತ್ತೆ ಪ್ರತ್ಯಕ್ಷಳಾದಳು. ಬಂದವಳೇ ನಕ್ಕು ಡೇವಿಡನ ಮುಂದೆಯೇ ಕುಳಿತಳು.

"ಮಗಳು ಎಲ್ಲಿ?"

"ಪಕ್ಕದ ಮನೆಯವಳು ನನ್ನ ಸ್ನೇಹಿತೆ. ಅವಳ ಮನೆಯಲ್ಲಿ ಮಗಳನ್ನು ಬಿಟ್ಟಿದ್ದೇನೆ. ಇಲ್ಲಿ ಡಾಕ್ಟರರನ್ನು ನೋಡಬೇಕಾಗಿತ್ತು. ಒಬ್ಬಳೇ ಬಂದಿದ್ದೆ. ಅಂದು ಹೆಚ್ಚು ಮಾತನಾಡಲಾಗಲಿಲ್ಲ. ಇಂದು ಕೇಳಿ, ಹೇಳುತ್ತೇನೆ."

"ಹೌದೇ? ಹೇಳು. ನನಗೂ ನಿನ್ನ ಬಗ್ಗೆ ತಿಳಿಯುವ ಕುತೂಹಲ."

"ನಾನು ಹಂಗೇರಿಯಿಂದ ಬಂದ ನಿರಾಶ್ರಿತ ಕುಟುಂಬದವಳು. ನನ್ನ ದೊಡ್ಡ ತಾತ ಸಿಡ್ನಿಗೆ ಬಂದು ನೂರು ವರ್ಷವಾಯಿತು. ಕುಟುಂಬದವರೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದಾರೆ. ಕೆಲವರು ಸತ್ತೂ ಹೋಗಿದ್ದಾರೆ. ನಾನು ಸಿಡ್ನಿಯಲ್ಲಿ ಇದ್ದೇನೆ. ನನ್ನ ತಂದೆ ತಾಯಿ ಯಾರೂ ಇಲ್ಲಿಲ್ಲ. ಅವರು ಬುಡಾಪೆಸ್ಟಿಗೆ ವಾಪಸ್ ಹೋದರು.

"ಶಾಲಾ ದಿನಗಳಲ್ಲಿಯೇ ನನಗೆ ಒಬ್ಬ ಬಾಯ್ ಫ್ರೆಂಡ್ ಸಿಕ್ಕ, ಹೆಸರು ಜೋಸೆಫ್. ಮದುವೆಯಾದೆವು. ಅವನು ಬಡಗಿಯಾಗಿ ಟ್ರೈನಿಂಗ್ ಪಡೆದ. ಇಬ್ಬರಿಗೂ ಶಾಲೆ ಮುಗಿಸಿದ ನಂತರ ಕೆಲಸ ಸಿಕ್ಕಿತು. ಮನೆ ಕಟ್ಟುವ ಕಂಟ್ರಾಕ್ಟರುಗಳು ಅವನಿಗೆ ಸಾಕಷ್ಟು ಕೆಲಸ ಕೊಡುತ್ತಿದ್ದರು. ಕೆಲಸವಿದ್ದ ದಿನ ಏನಿಲ್ಲವೆಂದರೂ ನೂರು ಡಾಲರ್ ಸಂಪಾದನೆ ಅವನಿಗೆ. ನಾನು ಸೂಪರ್ ಮಾರ್ಕೆಟ್ಟಿನಲ್ಲಿ ಚೆಕ್ ಔಟ್ ಆಪರೇಟರ್ ಆದೆ. ಒಂದು ವರ್ಷದಲ್ಲೇ ಮಗ ಸ್ಯಾಮ್ ಹುಟ್ಟಿದ. ಅವನಿಗೀಗ ನಾಲ್ಕು ವರ್ಷ. ಹೋದ ವರ್ಷ ಮತ್ತೆ ಗರ್ಭಿಣಿಯಾದೆ.

"ಇಬ್ಬರ ಸಂಪಾದನೆ ಇದೆ. ಒಂದಲ್ಲ ಒಂದು ದಿನ ನಮ್ಮದೇ ಮನೆ ಕಟ್ಟಿಕೊಳ್ಳಬಹುದು ಎಂಬ ಕನಸು ನನಗೆ. ಕಾಲಕ್ರಮೇಣ ಜೋಸೆಫ್ ಪೋಲಿ ಬಿದ್ದುಹೋದ. ಒಪ್ಪಿಕೊಂಡ ಕೆಲಸವನ್ನು ಮಾಡುತ್ತಿರಲಿಲ್ಲ. ಕಂಟ್ರಾಕ್ಟರುಗಳು ಅವನ ಕೈ ಬಿಟ್ಟರು. ನಾನೊಬ್ಬಳೇ ದುಡಿಯುತ್ತಿದ್ದೆ. ಅವನು ಮನೆಗೆ ಬಂದು ನನ್ನನ್ನು ದುಡ್ಡು ಕೇಳುತ್ತಿದ್ದ, ಕುಡಿತಕ್ಕೆ ಬೇಕಲ್ಲ. ನಾನು ಇಲ್ಲ ಎಂದರೆ ನನ್ನ ಮೇಲೆ ಕೈಮಾಡುತ್ತಿದ್ದ. ನಾನು ಪೊಲೀಸರಿಗೆ ದೂರು ಕೊಟ್ಟೆ. ಅವನು ಮನೆಗೆ ಬರಕೂಡದು ಎಂಬ ನಿರ್ಬಂಧ ಹಾಕಿಸಿದೆ. ಅವನಿಂದ ಸೆಪರೇಷನ್ ಪಡೆದೆ. ಈಗ ಅವನ ಸುಳಿವಿಲ್ಲ, ಅವನ ಬಗ್ಗೆ ತಿಳಿಯುವ ಆಸೆಯೂ ಇಲ್ಲ, ಅದು ಅಗತ್ಯವೂ ಇಲ್ಲ.